ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಯುಜಿನೀಟ್-ಆಯುಷ್/2025 ದಿನಾಂಕ: 25-11-2025

## ಯುಜಿನೀಟ್-2025 ಆಯುಷ್ ಕೋರ್ಸುಗಳ ಪ್ರವೇಶಾತಿಗೆ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ

ಆಯುಷ್ ಕೋರ್ಸುಗಳಿಗೆ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿದಿರುವ / ರದ್ದುಪಡಿಸಿಕೊಂಡಿರುವ / ಹೊಸದಾಗಿ ಸೇರ್ಪಡೆಯಾದ ಸೀಟುಗಳಿಗೆ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯನ್ನು ನಡೆಸಲಾಗುವುದು.

**ಅರ್ಹತೆ:**

ಆಯುಷ್ ಕೋರ್ಸುಗಳ ಪ್ರವೇಶಾತಿಗೆ ಮೊದಲನೇ ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಭಾಗವಹಿಸಿದ ಅರ್ಹ ಅಭ್ಯರ್ಥಿಗಳು ಯಾವುದೇ ಆಯುಷ್ ಸೀಟುಗಳನ್ನು ಹಂಚಿಕೆ ಮಾಡಿಕೊಳ್ಳದಿದ್ದಲ್ಲಿ ಲಭ್ಯವಿರುವ ಸೀಟುಗಳಿಗೆ ಆಸಕ್ತಿ ಇದ್ದಲ್ಲಿ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

ದಿನಾಂಕ 06-11-2025 ರ ಪ್ರಕಟಣೆಯಲ್ಲಿ ನೀಡಲಾಗಿರುವ ಎಲ್ಲಾ ಸೂಚನೆಗಳು ಯಥಾವತ್ತಾಗಿ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಗೆ ಅನ್ವಯಿಸುತ್ತದೆ.

ದಂತ ವೈದ್ಯಕೀಯ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಸೇರಿರುವ ಅಭ್ಯರ್ಥಿಗಳು ಹಾಗೂ 3ನೇ ಸುತ್ತಿನ ವೈದ್ಯಕೀಯ ಅಥವಾ ದಂತ ವೈದ್ಯಕೀಯ ಸುತ್ತಿನಲ್ಲಿ ತಾತ್ಕಾಲಿಕವಾಗಿ ಹಂಚಿಕೆ ಮಾಡಿಕೊಂಡಿರುವ ಭಾಗವಹಿಸಲು ಅರ್ಹತೆ ಇರುವುದಿಲ್ಲ.

ಅಖಿಲ ಭಾರತ ಕೌನ್ಸಿಲಿಂಗ್ / ಡೀಮ್ಡ್ ವಿಶ್ವವಿದ್ಯಾಲಯ / ಸೆಂಟ್ರಲ್ ಯೂನಿವರ್ಸಿಟಿ ಮುಂತಾದ ಮೊದಲನೆ, ಎರಡನೆ ಅಥವಾ ಮಾಪ್-ಅಪ್ ಸುತ್ತಿನಲ್ಲಿ ಸೀಟು ಹಂಚಿಕೆಯ ನಂತರ ಕಾಲೇಜಿಗೆ ವರದಿ ಮಾಡಿದ ಅಭ್ಯರ್ಥಿಗಳು ಅಥವಾ ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಹಂಚಿಕೆಯಾಗಿರುವ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.

ಅಭ್ಯರ್ಥಿಗಳು ಆಯುಷ್ ಕೋರ್ಸುಗಳಿಗೆ ಭಾಗವಹಿಸುವ ಮೊದಲು ಸೀಟುಗಳ ಲಭ್ಯತೆಯನ್ನು ಪರಿಶೀಲಿಸಿ ವಿವಿಧ ಕಾಲೇಜುಗಳಲ್ಲಿನ ಶುಲ್ಕದ ವಿವರಗಳನ್ನು ಗಮನಿಸಿ ನಂತರ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ.

ಅಭ್ಯರ್ಥಿಗಳು ಶುಲ್ಕದ ವಿವರಗಳನ್ನು ಪರಿಶೀಲಿಸಿದ ನಂತರ ದೃಢೀಕರಿಸಿಕೊಂಡು ಪೋಷಕರೊಡನೆ ಚರ್ಚಿಸಿ ನಂತರ ಈ ಸುತ್ತಿನಲ್ಲಿ ಭಾಗವಹಿಸಲು ಸಲಹೆ ನೀಡಲಾಗಿದೆ.

ಇತರೆ ಅಭ್ಯರ್ಥಿಗಳು ಆಯುಷ್ ಸೀಟುಗಳಲ್ಲಿ ಆಸಕ್ತಿ ಇದ್ದಲ್ಲಿ, ಪ್ರಸ್ತುತ ಕಾಲೇಜಿನಿಂದ ನಿಗದಿತ ಸಮಯದೊಳಗೆ ಮೂಲ ದಾಖಲೆಗಳನ್ನು ಪಡೆಯುವುದನ್ನು ದೃಢೀಕರಿಸಿಕೊಂಡ ನಂತರ ಈ ಸುತ್ತಿನಲ್ಲಿ ಭಾಗವಹಿಸ ಬಹುದಾಗಿದೆ. ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಸೀಟು ಹಂಚಿಕೆಯಾದ ನಂತರ ಈ ಹಿಂದೆ ಪಡೆದಿದ್ದ ಸೀಟು ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಅವರುಗಳು ಹಳೆಯ ಸೀಟನ್ನು ಮರಳಿ ಪಡೆಯಲು ಆಗುವುದಿಲ್ಲ. ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಕಾಲೇಜಿಗೆ ಪ್ರವೇಶ ಪಡೆಯಬೇಕು.

ನಿಗದಿತ ದಿನಾಂಕ ಮತ್ತು ಸಮಯದೊಳಗೆ ಹೊಸದಾಗಿ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯಲು ಪ್ರಸ್ತುತ ಕಾಲೇಜಿನಿಂದ ಮೂಲ ದಾಖಲೆಗಳನ್ನು ಪಡೆಯುವ ಜವಾಬ್ದಾರಿಯು ಅಭ್ಯರ್ಥಿಗಳದ್ದಾಗಿರುತ್ತದೆ.

ಇತರೆ ಕೋರ್ಸುಗಳಿಗೆ ಪಾವತಿಸಿದ ಶುಲ್ಕವನ್ನು ಈಗಾಗಲೇ ಕಾಲೇಜುಗಳಿಗೆ ವರ್ಗಾವಣೆ ಮಾಡಲಾಗಿದ್ದು ಆಯುಷ್ ಕೋರ್ಸುಗಳಿಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ ಆಕುಕ 345 ಪಿಐಎಂ 2025 ಬೆಂಗಳೂರು ದಿನಾಂಕ 02-08-2025 ಅನ್ವಯ ಎನ್ ಆರ್ ಐ ಉಳಿಕೆ ಸೀಟುಗಳನ್ನು ಅದೇ ಎನ್‌ಆರ್‌ಐ ಶುಲ್ಕದಲ್ಲೇ ಆಡಳಿತ ಮಂಡಳಿ ಕೋಟಾದಡಿಯಲ್ಲಿ ಹಂಚಿಕೆ ಮಾಡುವುದರಿಂದ ಎನ್ ಆರ್ ಐ ಸೀಟುಗಳಲ್ಲಿ ಆಸಕ್ತಿ ಇರುವ ಎಲ್ಲಾ ಅಭ್ಯರ್ಥಿಗಳು ಎನ್ ಆರ್ ಐ ಸೀಟುಗಳಿಗೆ ಇಚ್ಛೆಗಳನ್ನು ದಾಖಲಿಸಬಹುದು.

2

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

ಅಭ್ಯರ್ಥಿಗಳು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ಹಂಚಿಕೆ ಮಾಡಿಕೊಂಡ ಕಾಲೇಜಿಗೆ ಕಡ್ಡಾಯವಾಗಿ ವರದಿ ಮಾಡಿಕೊಳ್ಳಬೇಕು. ಅಭ್ಯರ್ಥಿಯು ನಿಗದಿಪಡಿಸಿದ ಕಾಲೇಜಿಗೆ ವರದಿ ಮಾಡಲು ವಿಫಲವಾದರೆ ಅವರು ಯಾವುದೇ ಸೀಟನ್ನು ಹೊಂದಿರುವುದಿಲ್ಲ. ಅಂತಹ ಅಭ್ಯರ್ಥಿಗಳೂ ಎರಡೂ ಸೀಟುಗಳನ್ನು ಕಳೆದುಕೊಳ್ಳುತ್ತಾರೆ ಮತ್ತು ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಕಡ್ಡಾಯವಾಗಿ ನಿಗದಿಪಡಿಸಿದ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು.

**ಹೊಸದಾಗಿ ಇಚ್ಛೆಗಳನ್ನು ದಾಖಲಿಸುವುದು: 25-11-2025 ರ ಸಂಜೆ 6.00 ರಿಂದ 27-11-2025 ಬೆಳಿಗ್ಗೆ 10.00 ರ ವರೆಗೆ**

1. ಈ ಸುತ್ತಿನಲ್ಲಿ ಭಾಗವಹಿಸಲು ಆಸಕ್ತಿ ಇರುವ ಅರ್ಹ ಅಭ್ಯರ್ಥಿಗಳು ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ ಇಚ್ಛೆ / ಆಯ್ಕೆಗಳನ್ನು ಪರಿಗಣಿಸಲಾಗುವುದಿಲ್ಲ.
2. **ಯಾವುದೇ ಕಾರಣಕ್ಕೂ ಇಚ್ಛೆಗಳನ್ನು ದಾಖಲಿಸಲು ಅವಧಿಯನ್ನು ವಿಸ್ತರಿಸಲಾಗುವುದಿಲ್ಲ.**
3. *ಮೆರಿಟ್ ಹಾಗೂ ಅಭ್ಯರ್ಥಿಯು ದಾಖಲಿಸುವ options ಆಧಾರದ ಮೇಲೆ ಸೀಟು ಹಂಚಿಕೆಯಾಗುವದರಿಂದ ಅಭ್ಯರ್ಥಿಗಳು ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಪ್ರವೇಶ ಪಡೆಯಬೇಕು.*

ಗಮನಿಸಿ:

ರದ್ದುಗೊಳ್ಳಬಹುದಾದ ಅಥವಾ ಹೊಸದಾಗಿ ಸೀಟುಗಳು ಸೇರ್ಪಡೆಯಾದಲ್ಲಿ ಅಂತಹ ಸೀಟುಗಳನ್ನೂ ಸಹ ಹಂಚಿಕೆ ಮಾಡುವುದರಿಂದ, ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆಯನ್ನು ತೋರಿಸದಿದ್ದರೂ ಸಹ ಅಭ್ಯರ್ಥಿಗಳು ಕಾಲೇಜಿಗೆ ಸೇರಬಯಸುವ (OPTIONS) ಇಚ್ಛೆಗಳನ್ನು ದಾಖಲಿಸಲು ಅಭ್ಯರ್ಥಿಗಳಿಗೆ ಸಲಹೆ ನೀಡಲಾಗಿದೆ.

**ಆಯುಷ್ ಕೋರ್ಸುಗಳ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ವೇಳಾಪಟ್ಟಿ**

| ಕ್ರ. ಸಂ. | ವಿವರಗಳು | ದಿನಾಂಕ ಮತ್ತು ಸಮಯ |
|---|---|---|
| 1 | ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆ | 25-11-2025 – **ಸಂಜೆ 6.00** ರ ನಂತರ |
| **2** | **ಹೊಸದಾಗಿ ಇಚ್ಛೆಗಳನ್ನು ದಾಖಲಿಸುವುದು:** | **25-11-2025 ರ ಸಂಜೆ 6.00 ರಿಂದ 27-11-2025 ಬೆಳಿಗ್ಗೆ 10.00 ರ ವರೆಗೆ** |
| 3 | ಸೀಟು ಹಂಚಿಕೆ ತಾತ್ಕಾಲಿಕ ಫಲಿತಾಂಶ: | 27-11-2025 ಮಧ್ಯಾಹ್ನ 2.00 ರ ನಂತರ |
| 4 | ಸೀಟು ಹಂಚಿಕೆ ಅಂತಿಮ ಫಲಿತಾಂಶ: | 28-11-2025 ಬೆಳಿಗ್ಗೆ 10.00 ರ ನಂತರ |
| 5 | ಶುಲ್ಕ ಪಾವತಿಸುವುದು ಹಾಗೂ **SEAT CONFIRMATION SLIP** ಡೌನ್‌ಲೋಡ್ ಮಾಡಿಕೊಳ್ಳುವುದು: | 28-11-2025 ರಿಂದ 29-11-2025 |
| 6 | ಎಲ್ಲಾ ಮೂಲ ದಾಖಲೆಗಳೊಂದಿಗೆ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 30-11-2025 – 5.30 ರೊಳಗೆ |

ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

No. ED/KEA/UGNEET-AYUSH/2025 Date: 25-11-2025

**UGNEET-2025 – Second Stray Vacancy Round seat allotment to AYUSH Courses**

Second Stray Vacancy round seat allotment will be conducted for admission to AYUSH courses for the AYUSH seats which remained unfilled / cancelled / newly added if any after Stray Vacancy round seat allotment.

**Eligibility:**

Candidates who have not been allotted any AYUSH seat in the earlier stray vacancy round can participate in this second Stray Vacancy Round if interested.

Candidates who have joined Dental and Medical Colleges allotted in the previous rounds and have provisionally allotted seats in the 3rd round of Medical or Dental seat allotments are not eligible to participate.

Candidates who have reported to the College after the allotment of seats in the first, second or mop-up round of All India Counselling/Deemed University/Central University etc. and those who have been allotted seat in Stray Vacancy Round are also not eligible to participate in the AYUSH Second Stray Vacancy round of UGNEET 2025.

All the instructions given in the notification dated 06-11-2025 will apply.

Candidates are advised to check the availability of seats and check the fee details of various colleges before participating in the Stage Vacancy round.

Candidates are advised to check the fee details, confirm and discuss with their parents before participating in this round.

Other candidates interested in AYUSH seats can participate in this round after confirming receipt of original documents from the present college within the stipulated time. Once a seat is allotted in the Stray Vacancy round, the seat previously allotted will be cancelled and they will not be able to get back the old seat for any reason. It is mandatory to take admission in the college for the allotted seat.

It is the responsibility of the candidates to obtain original documents from the current college to get admission in the newly allotted college within the stipulated date and time.

......2

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

As per Government Order No. AKUKA 345 PIM 2025 Bangalore dated 02-08-2025, the remaining NRI seats will be allotted under the Others quota at the same NRI fee, hence all the candidates interested in NRI seats can register their options for NRI seats.

**Fees paid for other courses have already been transferred to colleges and will not be adjusted for AYUSH courses.**

Candidates must report to the allotted college on or before the stipulated last date. If a candidate fails to report to the allotted college, he will not have any seat. Such candidates will also lose both the seats and the fee will not be refunded. It is mandatory to report to the allotted college.

**Entry of Fresh Options: 25-11-2025 from 6.00 PM to 27-11-2025 - 10.00 AM**

1. Eligible candidates interested in participating in this round should enter their options fresh. The options entered earlier will not be considered.
2. The period for entry of options will not be extended for any reason.
3. Candidates whose seats are allotted on the basis of merit and the options entered by the candidate must compulsorily take admission in the allotted seat.

Note:
Since such seats are also allotted in case of cancellation or new addition of seats, candidates are advised to enter their options even if the availability of seats is not shown in the seat matrix.

**STRAY VACANCY ROUND SEAT ALLOTMENT SCHEDULE TO AYUSH COURSES**

| Sl No. | Particulars | Date and Time |
|---|---|---|
| 1 | Publication of seat matrix | 25-11-2025 after 6.00 pm |
| 2 | Fresh Options entry | **25-11-2025- 6.00 PM to 27-11-2025 10.00 AM** |
| 3 | Publication of Provisional Seat Allotment Results | 27-11-2025 after 2.00 pm |
| 4 | Publication of final seat allotment results | 28-11-2025 after 2.00 pm |
| 5 | Payment of fees and downloading of SEAT CONFIRMATION SLIP | 28-11-2025 to 29-11-2025 |
| 6 | Last date for reporting to the colleges with all the original documents | 30-11-2025 – 5.30 PM |

Executive Director